ದೃಢವಾದ ಮಾತುಗಳಿಂದ, ಖಡಾಖಂಡಿತವಾಗಿ ನ್ಯೂನತೆಗಳನ್ನು ಎತ್ತಿ ತೋರಿಸಬಾರದೇ ಎಂದು ನಾನು ಯೋಚಿಸುತ್ತೇನೆ. ಯಾಕೆಂದರೆ ನನಗೇ ಅದು ಪರಿಪೂರ್ಣ ಕತೆಯಲ್ಲ ಎನ್ನುವುದು ಗೊತ್ತು. ಅದು ಜಗತ್ತಿನ ಅತ್ಯುತ್ತಮ ಕತೆಗಳ ಓದಿನಿಂದ ಹುಟ್ಟಿದ ಭಾವನೆಯಾಗಿರಬಹುದು. ಅವುಗಳೆದುರು ಈ ಕತೆಗೆ ಸ್ಥಾನವಿಲ್ಲ ಎಂಬ ಸ್ವಹೀನತಾಭಾವವೂ ಕಾರಣವಾಗಿರಬಹುದು. ಇಷ್ಟಾಗಿಯೂ ನನ್ನಲ್ಲಿ ಒಂದು ಕೆಟ್ಟ ಧೈರ್ಯವಿದೆ. ಅದೆಂದರೆ ಇಂಗ್ಲೀಷಿನಲ್ಲಿ ಒಂದು ಮಾತಿದೆ–**No statue is built in the name of a critic** ಅಂತ.

**1965**ರಿಂದ ನಾನು ಕತೆಗಳನ್ನು ಬರೆಯುತ್ತಿದ್ದೇನೆ. (ಈ ಮಾತನ್ನು ನಾನು ಗರ್ವದಿಂದ ಹೇಳುತ್ತಿಲ್ಲ.) ಸುಮಾರು ನೂರಕ್ಕೂ ಮಿಕ್ಕಿ ಕತೆಗಳನ್ನು ಬರೆದಿದ್ದೇನೆ. ಪತ್ರಿಕೆಗಳಲ್ಲಿ ಅವು (ಯಾವ ವಶೀಲಿಯೂ ಇಲ್ಲದೆ) ಪ್ರಕಟವಾಗಿದ್ದರೂ, ಪುಸ್ತಕ ರೂಪದಲ್ಲಿ ಅವುಗಳ ಅರ್ಧದಷ್ಟು ಮಾತ್ರ ಬಂದಿವೆ. ಉಳಿದವುಗಳನ್ನು ನಾನೇ ತಿರಸ್ಕರಿಸಿದ್ದೇನೆ. ಅವಲ್ಲದೇ ನನ್ನೊಳಗೆ ಇನ್ನೂ ಅನೇಕ ಅನುಭವಗಳಿದ್ದು ಅವುಗಳನ್ನು ಬರೆಯಲಾಗದೇ ನೋಯುತ್ತ ಕುಳಿತಿದ್ದೇನೆ. ಮುಖ್ಯ ಕಾರಣ ನನ್ನ ಆಲಸ್ಯ. ಅಂದುಕೊಂಡ ಕೂಡಲೇ ನನ್ನಿಂದ ಬರೆಯಲಾಗುವುದಿಲ್ಲ ಅಂತ ಹೇಳಿ, ಸ್ಫೂರ್ತಿಗಾಗಿ ಕಾಯುತ್ತ, ಅದನ್ನು ನಂಬಿಕೊಂಡು ಇರುವವನೂ ನಾನಲ್ಲ. ಮುಹೂರ್ತ ಕೂಡಿಬರಬೇಕಲ್ಲ? ಸಹಜ ಪ್ರಸವದ ಹಾಗೆ!

ಐತಿಹಾಸಿಕ ಸಂದರ್ಭದಲ್ಲಿ ಕತೆಯ ನಿರೂಪಣೆ ಹಾಗೂ ತಂತ್ರಗಳ ಆವಶ್ಯಕತೆಯ ಬಗ್ಗೆ ನನ್ನ ಯೋಚನೆ ಬೇರೆಯದೇ ಆಗಿದೆ. ಇದನ್ನು ಹೇಳಲೇ ಬೇಕೇ? ಹೇಳುವುದಿದ್ದರೆ ಹೊಸದಾಗಿ ಹೇಳಬೇಕಲ್ಲ, ಹೇಗೆ ಹೇಳಿದರೂ ಹಳಸಿದ ಶಬ್ದಗಳನ್ನೇ ಬಳಸಿದಂತಾಗುತ್ತದಲ್ಲ ಎಂಬ ತಹತಹ ನನ್ನದು. ಆ ಶಬ್ದಗಳು ಎಲ್ಲಿಲ್ಲದಿದ್ದರೂ ನಿಘಂಟಿನಲ್ಲಂತೂ ಇದ್ದೇಇದೆಯಲ್ಲ? ಹೀಗಿರುವಾಗ ನಾನು ಏನನ್ನು ಬಳಸಲಿ? ನನ್ನಲ್ಲಿರುವುದು ಶಬ್ದಗಳು (**Words**) ಮಾತ್ರ. 'ಲಂಚ ಪಡೆಯುತ್ತಾನೆ' ಅನ್ನುವುದಕ್ಕಿಂತ 'ಲಂಚ ಕೊಡುತ್ತಾನೆ' ಅನ್ನುವುದು ಭಿನ್ನವಾದ ಅರ್ಥಸ್ಫುರಣೆ ಮಾಡುತ್ತದಲ್ಲ! ಕಥಾತಂತ್ರವೂ ಹಾಗೆಯೇ ಒಂದು ಭಿನ್ನವಾದ ಜೋಡಣೆ. ಆದರೆ ಅದು 'ಸಾವಯವ ಶಿಲ್ಪದ ಸಮಗ್ರೀಕರಣ'ವಾಗಬೇಕು ಎಂದು ಒದ್ದಾಡುತ್ತೇನೆ. ಅದು ಸಿದ್ಧಿಯಾಗುವ ತನಕ ಬರೆಯಲಾರೆ. (ಅಥವಾ ಸಿದ್ಧಿಸಿದ ಮೇಲೆ ಬರೆಯುತ್ತೇನೆ).

ಕನ್ನಡದ ಸಂದರ್ಭದಲ್ಲಿ ಹೊಸತಾಗಿ ಬರೆಯುತ್ತಿರುವವರನ್ನು ಗಮನಿಸುತ್ತಿದ್ದೇನೆ. ದಲಿತ ಸಾಹಿತ್ಯ ಅಥವಾ ಅಲ್ಪಸಂಖ್ಯಾತ ವರ್ಗಗಳಿಂದ ಬಂದವರು ನಮಗೆ ಹೊಸ ಅನುಭವಗಳ ಕತೆಗಳನ್ನು ಕೊಡುತ್ತಿದ್ದಾರೆ. ಅವರಿಂದ ಓದುಗರನ್ನು ಅಚ್ಚರಿಗೊಳಿಸುವ ಇಲ್ಲವೇ ಚಕಿತಗೊಳಿಸುವ ಕತೆಗಳು ಬರುತ್ತಿವೆ. ಆದರೆ ಒಂದು ವಿಚಾರ ನನ್ನನ್ನು ಬಹಳವಾಗಿ ಕಾಡುತ್ತಿದೆ. ಕತೆ ಬರೆಯುವವರೆಲ್ಲ 'ಪದವಿಟ್ಟಳುಪದೊಂದು' ವಿಧಾನವನ್ನು ಅನುಸರಿಸುತ್ತಿದ್ದಾರೇನೋ, ಬರೆದದ್ದೆಲ್ಲ ತಕ್ಷಣ ಪ್ರಕಟವಾಗಬೇಕೆಂಬ ಧಾವಂತದಲ್ಲಿದ್ದಾರೇನೋ ಎಂಬ ಅನುಮಾನ ನನ್ನಲ್ಲಿದೆ. ಬಹುಶಃ ಆ ಕಾರಣದಿಂದಲೇ ಸಾರ್ವಕಾಲಿಕವಾದುದು ಬಾರದೇ ಇರಬಹುದು. ಕತೆ ಬರೆಯುವುದು ಒಂದು ಧ್ಯಾನಸ್ಥ ಸ್ಥಿತಿ. ಅದನ್ನು ಕಷ್ಟಪಟ್ಟು ಉತ್ತು, ಹೂಡಿ, ಕಳೆಕಿತ್ತು, ಬೀಜ ನೆಟ್ಟು, ನೀರು ಹೊಯ್ದು, ಗಿಡವಾಗಿ ಅರಳಿಸಿ, ಫಸಲು ಪಡೆಯಬೇಕೇ ವಿನಾ ಅನ್ಯ ದಾರಿಯಿಲ್ಲ. ಇದನ್ನು ನಾನು 'ಸೆರ್ಮನ್' ಆಗಿ ಹೇಳುತ್ತಿಲ್ಲ. ನನಗೆ ನಾನೇ ಹೇಳಿಕೊಳ್ಳುತ್ತಿದ್ದೇನೆ.